ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ: ಪಪೂಶಿ/ಶೈಶಾ-04/ತ.ಕು 03/2017-18 ದಿನಾಂಕ:20-07-2017.

ಸುತ್ತೋಲೆ

ವಿಷಯ: 2017-18ನೇ ಶೈಕ್ಷಣಿಕ ಸಾಲಿಗೆ ಪದವಿ ಪೂರ್ವ ಶಿಕ್ಷಣದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷಾ ವಿಷಯದಲ್ಲಿ ವ್ಯಾಕರಣ ಹಾಗೂ ಮಾತನಾಡುವ ಕೌಶಲವನ್ನು ಉತ್ತಮಗೊಳಿಸಲು (Improving grammar and Spoken English ) ವಿಶೇಷ ತರಗತಿಗಳನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರ ಆದೇಶ ಸಂಖ್ಯೆ: ಇಡಿ185 ಯೋಸಕ 2017, ಬೆಂಗಳೂರು ದಿನಾಂಕ: 07-07-2017.

2. ಈ ಕಛೇರಿ ಪತ್ರ ಸಂಖ್ಯೆ: ಪಪೂಶಿ/ಶೈಶಾ-04/ತ.ಕು-02/2017-18, ದಿನಾಂಕ: 10-05-2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು, 2017-18ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾನುವಾರದ ರಜಾ ದಿನಗಳಲ್ಲಿ (ಜುಲೈ 2017ರಿಂದ ಜನವರಿ 2018ರ ರವರೆಗೆ ಒಟ್ಟು ಸುಮಾರು 28 ಭಾನುವಾರಗಳಂದು) ಆಂಗ್ಲ ಭಾಷಾ ವಿಷಯದಲ್ಲಿ ವ್ಯಾಕರಣ ಹಾಗೂ ಮಾತನಾಡುವ ಕೌಶಲವನ್ನು ಉತ್ತಮಗೊಳಿಸಲು (Improving grammar and Spoken English) ವಿಶೇಷ ತರಗತಿಗಳನ್ನು ಹಮಿಕೊಳ್ಳಲಾಗಿದೆ.

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಾಧನೆ ರಾಷ್ಟ್ರ ಮಟ್ಟದಲ್ಲಿ ಉನ್ನತ ಶಿಕ್ಷಣಕ್ಕಾಗಿ ನಡೆಸುವ ಪ್ರವೇಶ ಪರೀಕ್ಷೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ಆದ್ದರಿಂದ ಸದರಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಆಂಗ್ಲ ಭಾಷಾ ವಿಷಯದಲ್ಲಿ ವ್ಯಾಕರಣ ಹಾಗೂ ಮಾತನಾಡುವ ಕೌಶಲವನ್ನು ಉತ್ತಮಗೊಳಿಸಲು (Improving grammar and Spoken English) ವಿಶೇಷ ತರಗತಿಗಳನ್ನು ನಡೆಸಿದ್ದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಧೈರ್ಯವಾಗಿ ಎದುರಿಸಿ ಉತ್ತಮ ಫಲಿತಾಂಶ ಪಡೆಯಲು ಸಹಾಯಕವಾಗುತ್ತದೆ. ಈ ದೃಷ್ಟಿಯಿಂದ ಸದರಿ ತರಬೇತಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸುವುದು ಅವಶ್ಯಕವಾಗಿದೆ.

ಪ್ರತಿ ಬಾನುವಾರದ ರಜೆಯಲ್ಲಿ ಹಮ್ಮಿಕೊಳ್ಳುತ್ತಿರುವ ತರಗತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಡೆಸಲಾಗುವುದು.

**ವಿಶೇಷ ತರಬೇತಿ ಕಾರ್ಯಕ್ರಮದ ರೂಪರೇಶೆಗಳು ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಜವಾಬ್ದಾರಿಗಳು ಈ ಕೆಳಗಿನಂತಿವೆ:-**

- ರಾಜ್ಯದ ಪ್ರತಿ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಒಂದು ನೋಡಲ್ ಕಾಲೇಜನ್ನು ಗುರುತಿಸಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.
- ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ಆ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ.

- ಆಯಾ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳನ್ನು ತಾಲ್ಲೂಕು ನೋಡಲ್ ಕೇಂದ್ರದ ಕಾಲೇಜಿನಲ್ಲಿ ನಡೆಯುವ ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ನಿಯೋಜಿಸಲು ಜಿಲ್ಲಾ ಉಪನಿರ್ದೇಶಕರು ರವರು ಕ್ರಮ ಕೈಗೊಳ್ಳುತ್ತಾರೆ.
- ಪ್ರತಿ ಭಾನುವಾರದ ತರಬೇತಿ ವಿಷಯಗಳನ್ನೊಳಗೊಂಡ ಕಾರ್ಯಕ್ರಮ ವೇಳಾಪಟ್ಟಿಯನ್ನು ಇಲಾಖೆಯಿಂದಲೇ ವಿಷಯ ತಜ್ಞರಿಂದ ಸಿದ್ಧಪಡಿಸಿ ನೀಡಲಾಗುವುದು.
- ಪ್ರತಿ ತರಬೇತಿ ಕೇಂದ್ರಕ್ಕೂ ಕನಿಷ್ಠ ಆಂಗ್ಲ ಭಾಷೆಯಲ್ಲಿ ಉತ್ತಮ ಜ್ಞಾನವುಳ್ಳ ಹಿರಿಯ 3 ಆಂಗ್ಲ ಭಾಷಾ ಉಪನ್ಯಾಸಕರನ್ನು ಸಂಯೋಜಕರನ್ನಾಗಿ ನಿಯೋಜಿಸುವುದು ಹಾಗೂ ವೇಳಾಪಟ್ಟಿಯಂತೆ ಉಪನ್ಯಾಸಕರ/ ವಿಷಯ ತಜ್ಞರ ಪಟ್ಟಿ ಸಿದ್ಧಪಡಿಸಿಕೊಂಡು ಪ್ರತಿ ತರಗತಿಗೆ ವಿಷಯ ತಜ್ಞರ ಕೊರತೆ ಇಲ್ಲದಂತೆ ನೋಡಿಕೊಳ್ಳುವುದು ಆಯಾ ಜಿಲ್ಲಾ ಉಪನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.
- ವಿಶೇಷ ತರಗತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋಮೇಟ್ರಿಕ್‌ನಲ್ಲಿ ಕಡ್ಡಾಯವಾಗಿ ಪಡೆಯುವುದು.
- ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋ ಮೇಟ್ರಿಕ್ ಯಂತ್ರದ ಮೂಲಕ ಪಡೆಯವ ಸಂಬಂಧವಾಗಿ ಪ್ರತಿ ತಾಲ್ಲೂಕು ತರಬೇತಿ ಕೇಂದ್ರದಲ್ಲಿ ಬಯೋ ಮೇಟ್ರಿಕ್ ಯಂತ್ರಗಳನ್ನು ಅಳವಡಿಸುವುದು. ಅದರಂತೆ ವಿದ್ಯಾರ್ಥಿಯ ಫೋಟೊ (ವೆಬ್ ಕ್ಯಾಮ್) ಹಾಗೂ ಬಯೋ ಮೇಟ್ರಿಕ್ ಡಾಟಾ ಎಂಟ್ರಿ ಮಾಡಿ ಡಾಟಾ ಬೇಸ್ ಕ್ರಿಯೇಟ್ ಮಾಡಲು ಕ್ರಮಕೈಗೊಳ್ಳುವುದು.
- ಪ್ರತಿ ದಿನ ವಿದ್ಯಾರ್ಥಿಗಳ ಬಯೋ ಮೇಟ್ರಿಕ್ ಹಾಜರಾತಿಯನ್ನು ನೋಡಲ್ ಅಧಿಕಾರಿಗಳು ನೋಡಲ್ ಕೇಂದ್ರದಿಂದ ನೇರವಾಗಿ ಮಾನ್ಯ ನಿರ್ದೇಶಕರಿಗೆ ಅದೇ ದಿನ ಇ-ಮೇಲ್ ಮುಖಾಂತರ ಸಲ್ಲಿಸುವುದು.

  Email address: commissioner.pue@gmail.com.
- ಪ್ರತಿ ಭಾನುವಾರವು ದಿನಕ್ಕೆ 90 ನಿಮಿಷಗಳ ಒಂದು ತರಗತಿ ವ್ಯಾಕರಣಕ್ಕೆ ಮತ್ತೊಂದು 90 ನಿಮಿಷಗಳ ತರಗತಿಯನ್ನ Spoken Englishಗೆ ನಿಗಧಿಪಡಿಸಿಕೊಳ್ಳುವುದು. ಎರಡು ಅವಧಿಗಳನ್ನೊಳಗೊಂಡಂತೆ ಪ್ರತಿ ತರಗತಿಯಲ್ಲಿ 50 ವಿದ್ಯಾರ್ಥಿಗಳಿಗೆ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. 2017 ಆಗಸ್ಟ್ ತಿಂಗಳಿನಿಂದ 2018ರ ಜನವರಿ ತಿಂಗಳ ವರೆಗೆ ಒಟ್ಟು ಸುಮಾರು 24ದಿನಗಳ ತರಗತಿಗಳನ್ನು ನಡೆಸಲು ವೇಳಾಪಟ್ಟಿ ಸಿದ್ಧಪಡಿಸುವುದು.
- ತಾಲ್ಲೂಕು ಸಂಯೋಜಕರು ಜಿಲ್ಲಾ ಉಪನಿರ್ದೇಶಕರ ರವರ ನಿರ್ದೇಶನದಂತೆ ಆಂಗ್ಲ ಭಾಷಾ ವಿಷಯದಲ್ಲಿ ನುರಿತ ಹಿರಿಯ ಉಪನ್ಯಾಸಕ/ ವಿಷಯತಜ್ಞರನ್ನು ಸರ್ಕಾರಿ/ಖಾಸಗಿ ಕಾಲೇಜುಗಳಿಂದ ಗುರುತಿಸಿ ತರಬೇತಿ ನೀಡಲು ನಿಯೋಜಿಸುವುದು.
- ಈ ಕಾರ್ಯಕ್ರಮದಲ್ಲಿ ಆಯಾ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗುವಂತೆ ಕ್ರಮ ವಹಿಸಲು ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು, ಸಂಬಂದಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರುಗಳಿಗೆ ಸೂಚಿಸುವುದು.
- ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಯೋಜಕರಿಗೆ ಹಾಗೂ ಉಪನ್ಯಾಸಕರು/ವಿಷಯ ತಜ್ಞರಿಗೆ ಸೂಕ್ತ ಸಂಭಾವನೆಗಳನ್ನು ನೀಡಲಾಗುವುದು.
- ರಜೆಯ ದಿನದಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಉಪನ್ಯಾಸಕರಿಗ/ವಿಷಯ ತಜ್ಞರಿಗೆ ***ಒಂದು ದಿನಕ್ಕೆ Rs. 500/-ಗಳ ಸಂಭಾವನೆ ನೀಡಲಾಗುವುದು.***
- ತಾಲ್ಲೂಕು ಸಂಯೋಜಕರ ಜವಾಬ್ದಾರಿ ಬಹಳ ಮಹತ್ವದ್ದಾಗಿದ್ದು, ಸದರಿ ವಿಶೇಷ ತರಬೇತಿ ಕಾರ್ಯಕ್ರಮದ ಯಶಸ್ಸಿನ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

- ಜಿಲ್ಲಾ ಉಪನಿರ್ದೇಶಕರು ಈ ಕುರಿತು ಯೋಜನೆಯನ್ನು ಸಿದ್ಧಪಡಿಸಿ ತಮ್ಮ ಜಿಲ್ಲೆಯಲ್ಲಿನ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮುಂಚಿತವಾಗಿ ತಿಳಿಸಿ ತಮ್ಮ ವ್ಯಾಪ್ತಿಗೆ ಒಳಪಡುವ ನೋಡಲ್ ಕಾಲೇಜಿಗೆ ತಮ್ಮ ವಿದ್ಯಾರ್ಥಿಗಳನ್ನು ನಿಯೋಜಿಸಿ ತರಬೇತಿ ಕಾರ್ಯಕ್ರಮವನ್ನು ಯಶಸ್ಸುಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
- ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಸದರಿ ತರಬೇತಿ ಕಾರ್ಯಕ್ರಮದ ಉಪಯುಕ್ತತೆ ಹಾಗೂ ಸಮಗ್ರ ಮಾಹಿತಿಯನ್ನು ನೀಡಿ ಪೋಷಕರು ವಿದ್ಯಾರ್ಥಿಯನ್ನು ತರಗತಿಗೆ ಹಾಜರಾಗುವಂತೆ ಪ್ರೇರೇಪಿಸುವುದು.
- ಒಂದು ವೇಳೆ ಯಾವುದೇ ಕಾಲೇಜಿನ ವಿದ್ಯಾರ್ಥಿಗಳಿಂದ ಉತ್ತಮ ರೀತಿಯ ಹಾಜರಾತಿ ಕಂಡು ಬರದೆ ಇದ್ದರೆ ಸದರಿ ಕಾಲೇಜಿನ ಪ್ರಾಚಾರ್ಯರನ್ನೇ ಹೊಣೆಗಾರರಾನ್ನಾಗಿ ಮಾಡಲಾಗುವುದು.
- ವೇಳಾಪಟ್ಟಿಯಂತೆ ನಿಯೋಜಿಸಿಕೊಂಡಿರುವ ಉಪನ್ಯಾಸಕರು, ತರಬೇತಿಗೆ ಹಾಜರಾಗುವಂತೆ ನೋಡಿಕೊಳ್ಳುವುದು. ಅನಿವಾರ್ಯ ಕಾರಣಗಳಿಂದ ಯಾವುದೇ ತರಗತಿಗೆ ನಿಯೋಜನೆಗೊಂಡ ಉಪನ್ಯಾಸಕರು/ಸಂಯೋಜಕರು ಬರುವುದು ತಡವಾದರೇ ಬದಲಿ ಉಪನ್ಯಾಸಕರು/ಸಂಯೋಜಕರು ತರಗತಿಯನ್ನು ನಡೆಸುವುದು. ಯಾವುದೇ ಕಾರಣಕ್ಕೂ ಯಾವುದೇ ತರಗತಿ ಖಾಲಿ ಇರದಂತೆ ನೋಡಿಕೊಳ್ಳುವುದು.
- ಬೇರೆ ಬೇರೆ ಊರುಗಳಿಂದ ತರಬೇತಿಗೆ ಬರುವ ವಿದ್ಯಾರ್ಥಿಗಳು ನಿಗಧಿತ ವೇಳಾಪಟ್ಟಿಯಂತೆ ತರಗತಿಗಳಿಗೆ ಹಾಜರಾಗಿ ಸಂಜೆ ತಮ್ಮ ತಮ್ಮ ಮನೆಗೆ ಹೋಗುವ ವರೆಗೆ ನೋಡಿಕೊಳ್ಳುವುದರೊಂದಿಗೆ ಯಾವುದೇ ವಿದ್ಯಾರ್ಥಿಗಳಿಗೆ ತೊಂದರೆ ಯಾಗದಂತೆ, ಸಂಯೋಜಕರು ನೋಡಿಕೊಳ್ಳುವುದು.
- ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಮೊದಲ ಮತ್ತು ಕೊನೆಯ ಭಾನುವಾರದಂದು ಒಂದು ಕಿರು ಪರೀಕ್ಷೆಯನ್ನು (25/50ಅಂಕಗಳಿಗೆ) ನಡೆಸಿ ಫಲಿತಾಂಶದ ಬಗ್ಗೆ ವರದಿಯನ್ನು ಮಾನ್ಯ ನಿರ್ದೇಶಕರಿಗೆ 2018 ಫೆಬ್ರುವರಿ ಮೊದಲ ವಾರದೊಳಗೆ ನೀಡತಕ್ಕದ್ದು. ತರಬೇತಿ ಕಾರ್ಯಕ್ರಮದ ವರದಿಯನ್ನು ಪರಿಶೀಲಿಸಿದ ನಂತರ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು.
- ಪ್ರತಿ ತಾಲ್ಲೂಕು ಕೇಂದ್ರದ ನೋಡಲ್ ಕಾಲೇಜಿಗೆ ಸಾದಿಲ್ವಾರ ವೆಚ್ಚಕ್ಕಾಗಿ ಅನುದಾನ್ನ ಬಿಡುಗಡೆಗೊಳಿಸಲಾಗುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಅಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಇ-ಅಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.